SEPTEMBER 13, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ ಧ್ಯೇಯ:** ರಾಜ್ಯಾದ್ಯಂತ ಜನತಾ ನ್ಯಾಯಾಲದ ಮೂಲಕ, ರಾಜೀ ಸಂಧಾನದ ವ್ಯಾಜ್ಯ ವಿಲೇವಾರಿ.

**ಹಾಸನ ಜಿಲ್ಲೆ, ಹೊಳೆನರಸೀಪುರ** ತಾಲೂಕಿನಲ್ಲಿ, ಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಅವಘಡ; ಲಾರಿ ಹಾಯ್ದು, 9 ಜನರ ಸಾವು.

**ಸ್ಟೇಷನರಿ ಹಾಗೂ ಪ್ಯಾಕ್ಡ್ ಖಾದ್ಯಗಳ**, ಪರಿಷ್ಕೃತ ಸರಕು ಮತ್ತು ಸೇವಾ ತೆರಿಗೆ, ಈ ತಿಂಗಳ 22ನೇ ತಾರೀಖಿನಿಂದ, ಜಾರಿಗೆ.

**ಧಾರವಾಡ ಕೃಷಿ** ವಿಶ್ವವಿದ್ಯಾಲಯದಲ್ಲಿ, ಇಂದಿನಿಂದ ಕೃಷಿ ಮೇಳ

<><><>

**'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಧ್ಯೇಯದೊಂದಿಗೆ,** ಇಂದು, 3ನೇ ರಾಷ್ಟ್ರೀಯ ಲೋಕ ಅದಾಲತ್ ರಾಜ್ಯಾದ್ಯಂತ ಆಯೋಜಿತವಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ, ರಾಜಿ ಸಾಧ್ಯತೆಯ ಪ್ರಕರಣಗಳನ್ನು, ಕಕ್ಷಿದಾರರ ಸಮಕ್ಷಮ ಇತ್ಯರ್ಥಪಡಿಸಲು, ಇಂದು ಜನತಾ ನ್ಯಾಯಾಲಯದಲ್ಲಿ, ಲೋಕ ಅದಾಲತ್ ಜರುಗಲಿದೆ. ಹೆಚ್ಚಿನ ಮಾಹಿತಿಗೆ, ನಾಲ್ಸಾ ಕಾನೂನು ಉಚಿತ ಸಹಾಯವಾಣಿ, 1–5–1–0–0 ಸಂಪರ್ಕಿಸಬಹುದು.

<><><>

**ಧಾರವಾಡ ಜಿಲ್ಲೆ, ರಾಯಾಪುರ ಬಳಿಯ,** ಎನ್.ಜಿ.ಇ.ಎಫ್ – ನ್ಯೂ ಗವರ್ನಮೆಂಟ್ ಇಲೆಕ್ಟ್ರಿಕಲ್ ಫ್ಯಾಕ್ಟರಿ ಪುನರುಜ್ಜೀವನಕ್ಕೆ, ಜೆ.ಎಫ್.ಇ ಶೋಜಿ, ನಾಲ್ಕು ನೂರು ಕೋಟಿ ರೂಪಾಯಿ ಹೂಡಿಕೆ ಮಾಡಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ತಿಳಿಸಿರುವ ಸಚಿವರು, ಕೊಪ್ಪಳದಲ್ಲಿ, ನವೀಕರಿಸಬಹುದಾದ, ಹಸಿರು ಇಂಧನ ಆಧರಿಸಿದ, ಉಕ್ಕು ಉತ್ಪಾದನೆ ಘಟಕ 2 ಸಾವಿರದ 345 ಕೋಟಿ ರೂಪಾಯಿ ಹೂಡಿಕೆಯೊಂದಿಗೆ, ಸ್ಥಾಪನೆಯಾಗಲಿದೆ. ಕೋಲಾರ ಜಿಲ್ಲೆಯ, ನರಸಾಪುರದ ಹೊಂಡಾ ಇಲೆಕ್ಟ್ರಾನಿಕ್ ವೆಹಿಕಲ್ ಘಟಕಕ್ಕೆ, 600 ಕೋಟಿ ರೂಪಾಯಿ ಹೂಡಿಕೆಯಾಗಲಿದೆ ಎಂದಿದ್ದಾರೆ.

<><><>

**ಇನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿರುವ,** ಸರ್ಕಾರಿ ಕನ್ನಡ ಶಾಲೆಗಳಲ್ಲಿ ಕೃತಕ ಬುದ್ಧಿಮತ್ತೆ ಆಧರಿತ, ಸ್ಮಾರ್ಟ್ ತರಗತಿಗಳನ್ನು ಆರಂಭಿಸಲು, ಯೋಜಿಸಲಾಗಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಗದಗ ನಲ್ಲಿ ಮಾತನಾಡಿದ ಅವರು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ, ಸರ್ಕಾರಿ ಶಾಲೆಗಳ, ಮೂರು ಸಾವಿರಕ್ಕೂ ಹೆಚ್ಚು ವರ್ಗ ಕೋಣೆಗಳ ನಿರ್ಮಾಣ ಯೋಜನೆ, ಅನುಮೋದಿಸಲಾಗಿದೆ ಎಂದರು.

<><><>

**ಪ್ರಧಾನಮಂತ್ರಿ** ಉಚ್ಚತರ ಶಿಕ್ಷಾ ಅಭಿಯಾನ 'ಉಷಾ' ಯೋಜನೆ ಅಡಿ, ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯಗಳು, 'ಮೇರು' ಕಾರ್ಯಕ್ರಮದಡಿ, ಸಂಶೋಧನೆ ಹಾಗೂ ನಾವಿನ್ಯತೆಗೆ, ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಒತ್ತು ನೀಡಿದೆ ಎಂದು, ಉಪ ಕುಲಪತಿ ಸಿ.ಎಂ. ತ್ಯಾಗರಾಜ ತಿಳಿಸಿದ್ದಾರೆ. ಭೂತರಾಮನಹಟ್ಟಿಯ, ವಿಶ್ವವಿದ್ಯಾಲಯದ ಸಭಾ ಭವನದಲ್ಲಿ ಆಯೋಜಿತ, 'ಸಂಶೋಧನಾ ವಿಧಾನ ಮತ್ತು ಸಂಶೋಧನಾ ಬೌದ್ಧಿಕ ಸ್ವಾಮ್ಯತೆ', ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಸಮಾಜ ಮತ್ತು ಸಾಮಾಜಿಕರ ಹಿತದ, ಅನ್ವಯಿಕ ಸಂಶೋಧನೆಗಳಿಗೆ ಒತ್ತು ನೀಡಲಾಗುತ್ತಿದೆ, ಎಂದರು.

<><><>

**ರಾಜ್ಯ ಕೃಷಿ ವ್ಯವಹಾರ ನಿಗಮ,** ಹಾಗೂ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ, ಬೆಂಗಳೂರು ಕೃಷಿ ಸಂಸ್ಥೆಯಲ್ಲಿ, 'ಮುಕ್ತ ವ್ಯಾಪಾರ ಒಪ್ಪಂದ: ದೇಶದ ಕೃಷಿ ವಹಿವಾಟಿನ ಹಿತರಕ್ಷಣೆ' ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಿತ್ತು. ಕಪೆಕ್ ವ್ಯವಸ್ಥಾಪಕ ನಿರ್ದೇಶಕ, ಸಿ.ಎನ್ ಶಿವಪ್ರಕಾಶ, ವಿಚಾರ ಸಂಕಿರಣ ಉದ್ಘಾಟಿಸಿ, ಮಾತನಾಡಿ, 2024–25ನೇ ಸಾಲಿನಲ್ಲಿ, 355 ಮಿಲಿಯನ್ ಟನ್ ಆಹಾರ ಧಾನ್ಯಗಳು ಹಾಗೂ 367 ಮಿಲಿಯನ್ ಟನ್ ತೋಟಗಾರಿಕೆ ಬೆಳೆಗಳನ್ನು, ಭಾರತ ಉತ್ಪಾದಿಸಿದೆ. ಹಲವು ದೇಶಗಳಿಗೆ ಗಣನೀಯ ಪ್ರಮಾಣದಲ್ಲಿ, ರಫ್ತು ಮಾಡುತ್ತಿದೆ, ಎಂದರು.

<><><>

**ರಾಜ್ಯದ ಹಲವು ನದಿಗಳ ಜೋಡಣೆ** ಹಾಗೂ ನ್ಯಾಯಯುತ ನೀರು ಹಂಚಿಕೆ ಪ್ರಸ್ತಾವಗಳು, ನನೆಗುದಿಗೆ ಬಿದ್ದಿದ್ದು, ಮುಖ್ಯಮಂತ್ರಿಯವರು, ಕೂಡಲೇ ಸರ್ವಪಕ್ಷ ಸಭೆ ಕರೆದು, ಚರ್ಚಿಸುವಂತೆ, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಆಗ್ರಹಿಸಿದ್ದಾರೆ. ಹಾವೇರಿಯಲ್ಲಿ ಮಾತನಾಡಿದ ಅವರು, ಕಾವೇರಿ, ಗೋದಾವರಿ, ಕೃಷ್ಣ ಹಾಗೂ ಮಹಾದಾಯಿ, ಒಟ್ಟು ನಾಲ್ಕು ನದಿಗಳ ಜೋಡಣೆ ಹಾಗೂ ನದಿ ನೀರಿನ ನ್ಯಾಯಬದ್ಧ ಹಂಚಿಕೆ ಕುರಿತು, ಕರಡು ಒಪ್ಪಂದದಲ್ಲಿ, ರಾಜ್ಯಕ್ಕೆ ಅನ್ಯಾಯವಾಗದಂತೆ, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ನೋಡಿಕೊಳ್ಳಬೇಕಿದೆ ಎಂದರು.

<><><>

**ಹಾಸನ ಜಿಲ್ಲೆ, ಹೊಳೆನರಸೀಪುರ** ತಾಲೂಕು, ಮೊಸಳೆಹೊಸಳ್ಳಿ ಬಳಿ, ಗಣಪತಿ ವಿಸರ್ಜನಾ ಮೆರವಣಿಗೆ ಸಾಗುತ್ತಿದ್ದ ವೇಳೆ, ಟ್ರಕ್ ಹಾಯ್ದ ಪರಿಣಾಮ, 9 ಜನ ಸ್ಥಳದಲ್ಲೇ ಸಾವನ್ನಪ್ಪಿ, ಇಪ್ಪತ್ತಕ್ಕೂ ಹೆಚ್ಚು ಜನ, ಗಾಯಗೊಂಡ ದುರ್ಘಟನೆ ಸಂಭವಿಸಿದೆ. ಗಾಯಾಳುಗಳನ್ನು ಹಾಸನದ – ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸ್ಥಳಕ್ಕೆ ತೆರಳಿ, ಪರಿಶೀಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಘಟನೆ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ, ತಲಾ 5 ಲಕ್ಷ ರೂಪಾಯಿ ಪರಿಹಾರ ಹಾಗೂ ಗಾಯಗೊಂಡವರ ಚಿಕಿತ್ಸೆ ವೆಚ್ಚವನ್ನು ಭರಿಸಲಾಗುವುದು, ಎಂದಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳು ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿ, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದರು.

<><><>

**ವಿದ್ಯುನ್ಮಾನ ಆಡಳಿತ,** ಇ–ಗವರ್ನನ್ಸ್ ಅಪ್ಲಿಕೇಷನ್ ಮೂಲಕ, ಧಾರವಾಡ ಜಿಲ್ಲೆಯಾದ್ಯಂತ, ವಿಮುಕ್ತ ದೇವದಾಸಿಯರ ಮರು ಸಮೀಕ್ಷೆ, ನಾಡಿದ್ದು 15ನೇ ತಾರೀಖಿನಿಂದ, ನವೆಂಬರ್ 21ರ ವರೆಗೆ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ರಾಜ್ಯ ಸರ್ಕಾರ, ದೇಶದಲ್ಲಿಯೇ ಮೊದಲ ಬಾರಿಗೆ, ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ಕೈಗೊಂಡಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಮೀಕ್ಷೆ ಕಾರ್ಯ ಆಯೋಜಿತವಾಗಿದೆ, ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು, ಅರ್ಹ ಫಲಾನುಭವಿಗಳು ಸಮೀಕ್ಷೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲಿದ್ದಾರೆ ಎಂದು, ಹೇಳಿದರು.

<><><>

**ಜನ ಸಾಮಾನ್ಯರಿಗೆ,** ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಕಲ್ಪಿಸುವ, ಯೋಜನೆಗಳಲ್ಲಿ ಶತ ಪ್ರತಿಶತ ಸೇರ್ಪಡೆ ಅಭಿಯಾನ, ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ, ಈ ತಿಂಗಳ 30ನೇ ತಾರೀಖಿನ ವರೆಗೆ, ರಾಜ್ಯಾದ್ಯಂತ ಜರುಗಲಿದೆ. ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ನಾಗೇನಹಳ್ಳಿಯ, ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾನಗಲ್ಲ ಗ್ರಾಮದಲ್ಲಿ, ಆರ್ಥಿಕ ಸೇರ್ಪಡೆ ಯೋಜನೆಗಳ ಕುರಿತು, ಜನ ಜಾಗ್ರತಿ ಅಭಿಯಾನ ಜರುಗಿತು. ಕರ್ನಾಟಕ ಗ್ರಾಮೀಣ ಬ್ಯಾಂಕ್, ಹೊಸಪೇಟೆ ಶಾಖೆ ವ್ಯವಸ್ಥಾಪಕ ವರ್ಧಮಾನ ಪಾಲ್ಗೊಂಡು, ಪ್ರಧಾನಮಂತ್ರಿ ಜೀವನಜ್ಯೋತಿ ವಿಮೆ, ಪ್ರಧಾನಮಂತ್ರಿ ಸುರಕ್ಷಾ ವಿಮೆ, ಅಟಲ್ ಪಿಂಚಣಿ ಯೋಜನೆ ಹಾಗೂ ಮುದ್ರಾ ಸಾಲ ಯೋಜನೆ ಲಾಭಗಳ ಕುರಿತು, ಗ್ರಾಮಸ್ಥರಿಗೆ ಮಾಹಿತಿ ನೀಡಿದರು. ಅಟಲ್ ಪಿಂಚಣಿ ಯೋಜನೆಯಡಿ, ಹೆಸರು ನೋಂದಾಯಿಸಿರುವ, ಎಂ.ಕೆ. ವೈಷ್ಣವಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಕೇಂದ್ರದ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಶಿಫಾರಸಿನಂತೆ,** ಪರಿಷ್ಕೃತ ಸರಕು ಮತ್ತು ಸೇವಾ ತೆರಿಗೆ, ಅಧಿನಿಯಮ, ಈ ತಿಂಗಳ 22ನೇ ತಾರೀಖಿನಿಂದ, ಜಾರಿಗೊಳ್ಳಲಿದೆ. ಪ್ಯಾಕೇಜ್ಡ್ ಆಹಾರ ವಸ್ತುಗಳ ಜಿ.ಎಸ್.ಟಿ, ದರ ಶೇಕಡ 5 ರಷ್ಟು ಹಾಗೂ ಹಾಲು, ಹಾಲಿನ ಉಪ ಉತ್ಪನ್ನ ಬೆಣ್ಣೆ, ತುಪ್ಪದ ಮೇಲಿನ ತೆರಿಗೆಯನ್ನು, ಶೇಕಡ 5ಕ್ಕೆ ಇಳಿಸಲಾಗಿದೆ. ಸಂಸ್ಕರಿತ ಆಹಾರ ವಸ್ತುಗಳ ಮೇಲೆ, ಪ್ರಸ್ತುತ ಶೇಕಡ 12 ರಷ್ಟು ತೆರಿಗೆ ವಿಧಿಸಲಾಗಿದೆ. ಬರೆಹದ ಪುಸ್ತಕಗಳು, ನೋಟ್ ಬುಕ್ಸ್, ಪೆನ್ಸಿಲ್, ಕ್ರೇಯಾನ್, ಚಾರ್ಕೋಲ್, ಮ್ಯಾಪ್ ಹಾಗೂ ಚಾರ್ಟ್‌ಗಳಿಗೆ ಶೂನ್ಯ ತೆರಿಗೆ ವಿಧಿಸಲಾಗಿದೆ. ಈ ಮೊದಲು, ಶೇಕಡ 12 ರಷ್ಟು ತೆರಿಗೆ ಈ ವಸ್ತುಗಳ ಮೇಲೆ ನಿಗದಿ ಪಡಿಸಲಾಗಿದೆ.

<><><>

**'ಪೌಷ್ಟಿಕ ಆಹಾರ ಭದ್ರತೆಗೆ,** ಮಣ್ಣಿನ ಆರೋಗ್ಯ ಹಾಗೂ ಸಾಂಪ್ರದಾಯಿಕ ತಳಿಗಳು' ಶೀರ್ಷಿಕೆಯಡಿ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ಇಂದಿನಿಂದ 16 ನೇ ತಾರೀಖಿನ ವರೆಗೆ, ನಾಲ್ಕು ದಿನಗಳ, ಕೃಷಿ ಮೇಳ ಆಯೋಜಿಸಿದೆ. ಇಂದು ಬೆಳಗ್ಗೆ 10:30ಕ್ಕೆ ಫಲ ಪುಷ್ಪ ಪ್ರದರ್ಶನ, ವಿಸ್ಮಯಕಾರಿ ಕೀಟ ಪ್ರಪಂಚ ಪ್ರದರ್ಶನ ಹಾಗೂ ಬೀಜ ಮೇಳ ಉದ್ಘಾಟನೆಯಾಗಲಿದೆ. 20 ಲಕ್ಷಕ್ಕಿಂತ ಅಧಿಕ ರೈತರು, ನಾಲ್ಕು ದಿನಗಳ ಕೃಷಿ ಮೇಳದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

<><><>

**ಕಲ್ಯಾಣ ಕರ್ನಾಟಕದ,** ಒಟ್ಟು ಏಳು ಜಿಲ್ಲೆಗಳನ್ನೊಳಗೊಂಡ, ಕಲಬುರಗಿ ವಿಭಾಗ ಮಟ್ಟದ, ದಸರಾ ಕ್ರೀಡಾಕೂಟ, ನಾಡಿದ್ದು 15ನೇ ತಾರೀಖು, ಬಳ್ಳಾರಿ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಲಿದೆ. ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ತಂಡಗಳು, ಹಾಕಿ, ಬಾಕ್ಸಿಂಗ್ ಹಾಗೂ ಕಬಡ್ಡಿ ಪಂದ್ಯಗಳಲ್ಲಿ, ಸ್ಪರ್ಧಿಸಲಿವೆ.

<><><>

**ಕೇಂದ್ರದ ನವ ಹಾಗೂ ನವೀಕರಿಸಬಹುದಾದ,** ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಅವರ ಅಧ್ಯಕ್ಷತೆಯಲ್ಲಿ, ಕೇಂದ್ರ ಪುರಸ್ಕೃತ ಯೋಜನೆಗಳ ದಿಶಾ ಸಭೆ, ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾ ಭವನದಲ್ಲಿ, ಇಂದು ಮಧ್ಯಾಹ್ನ 3 ಗಂಟೆಗೆ ಜರುಗಲಿದೆ.

<><><>

**ಯಾದಗಿರಿ ಜಿಲ್ಲೆಯಲ್ಲಿ, ಪೋ ಣ ಮಾಸಾಚರಣೆ,** ಮಿ ನ್ ಶಕ್ತಿ ಯೋಜನೆ ಅಡಿ, ಸಂಕಲ್ಪ ವಿಶೇ ಜಾಗೃತಿ ಅಭಿಯಾನ ಕಾರ್ಯಕ್ರಮಕ್ಕೆ. ಜಿಲ್ಲಾಧಿಕಾರಿ ಹ ಲ್ ಭೋಯರ್ ಚಾಲನೆ ನೀಡಿದ್ದಾರೆ. ಕಲಬುರಗಿ ಜಿಲ್ಲೆ, ಹೀರಾಪುರ ವಲಯದ, ಇಕ್ಬಾಲ್ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ, ರಾಷ್ಟ್ರೀಯ ಪೋಷಣ ಮಾಸಾಚರಣೆಗೆ, ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀನಿವಾಸ ನವಲೆ ಚಾಲನೆ ನೀಡಿದರು. ಕೊಪ್ಪಳದ, ವದಗನಾಳ ಅಂಗನವಾಡಿ ಕೇಂದ್ರದಲ್ಲಿ, 8ನೇ ರಾಷ್ಟ್ರೀಯ ಪೋಷಣ ಮಾಸಾಚರಣೆಯನ್ನು, ಹಿರಿಯ ಸಿವಿಲ್ ನ್ಯಾಯಾಧೀಶ ಮಹಾಂತೇಶ ದರಗದ ಉದ್ಘಾಟಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ ಧ್ಯೇಯ;** ರಾಜ್ಯಾದ್ಯಂತ ಜನತಾ ನ್ಯಾಯಾಲದ ಮೂಲಕ, ರಾಜೀ ಸಂಧಾನದ ವ್ಯಾಜ್ಯ ವಿಲೇವಾರಿ.

**ಹಾಸನ ಜಿಲ್ಲೆ, ಹೊಳೆನರಸೀಪುರ** ತಾಲೂಕಿನಲ್ಲಿ, ಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಅವಘಡ; ಲಾರಿ ಹಾಯ್ದು, 9 ಜನರ ಸಾವು.

**ಸ್ಟೇಷನರಿ ಹಾಗೂ ಪ್ಯಾಕ್ಡ್ ಖಾದ್ಯಗಳ,** ಪರಿಷ್ಕೃತ ಸರಕು ಮತ್ತು ಸೇವಾ ತೆರಿಗೆ, ಈ ತಿಂಗಳ 22ನೇ ತಾರೀಖಿನಿಂದ, ಜಾರಿಗೆ.

**ಧಾರವಾಡ ಕೃಷಿ** ವಿಶ್ವವಿದ್ಯಾಲಯದಲ್ಲಿ, ಇಂದಿನಿಂದ ಕೃಷಿ ಮೇಳ.

<><><>